ಶ್ರೀ ಶ್ರೀ ಯಾದವಾರ್ಯರು

ರಚನೆ :

ಜೆ. ಹೆಚ್. ಬಿ. ಆಚಾರ್ಯ

ಬೆಂಗಳೂರು

ಪ್ರಕಾಶಕರು :

ಶ್ರೀ ಎನ್. ಮಾಧವರಾಯರು

ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಷನರ್

ಗೌರೀಬಿದನೂರು

ಶ್ರೀ ಶ್ರೀ ಯಾದವಾರ್ಯರು

ರಚನೆ

ಜಿ. ಹೆಚ್. ಬಿ. ಆಚಾರ್ಯ

ಬೆಂಗಳೂರು

ಪ್ರಕಾಶಕರು

ಶ್ರೀ ಎನ್. ಮಾಧವರಾಯರು

ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಷನರ್

ಗೌರೀಬಿದನೂರು

ಮೊದಲ ಮುದ್ರಣ 500 ಪ್ರತಿಗಳು

ಮುದ್ರಕರು :

ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ನಿಯಮಿತ
ಚಾಮರಾಜಪೇಟೆ, ಬೆಂಗಳೂರು

ಶ್ರೀ ಶ್ರೀ ಯಾದವಾರ್ಯರು

ಬಾದರಾಯಣನನ್ನು ಬಲ್ಮೋದದಿಂ ನೋಡಿ
ಹಸ್ತಲಾಘವವಿತ್ತ ಜ್ಞಾನಿ ನೀನು!
ಪರಿಮಳಾಚಾರ್ಯರ ವರಸುಧಾ ಪ್ರವಚನ
ಕೇಳಿದ ಬಲ್ಭಾಗ್ಯಶಾಲಿ ನೀನು!
ಮಂತ್ರಿತ ಜಲದಿಂದ ಮರ ಮತ್ತೆ ಚಿಗುರಿತು
ಮಂತ್ರಸಿದ್ಧಿ ಪಡೆದ ಮಾನ್ಯ ನೀನು!
ಭಕ್ತರ ಪೋಷಣೆ ಭಗವಂತ ನಿನದೆಂದು
ಒರೆಹಚ್ಚಿ ತಿಳಿಸಿದ ಧೀರ ನೀನು!
ಆರ್ತಿ ಹೊಂದದ ವೈರಾಗ್ಯಮೂರ್ತಿ ನೀನು!
ಅಸ್ಥಿಗತವಾಯ್ತು ಶ್ರೀಭಾಗವತವು ನಿಮಗೆ
ಕರವ ಮುಗಿಯುವೆ ಕಾಪಾಡು ವಿಮಲಚರ್ಯ!
ಯಾತನೆಂಗಳ ಕಳೆಯಯ್ಯ! ಯಾದವಾರ್ಯ!

—ಭೀಮಕವಿ

ವಿಜ್ಞಾಪನೆ

ಪರಮಭಾಗವತೋತ್ತಮನಾದ ಶ್ರೀ ಪರೀಕ್ಷನ್ಮಹಾರಾಜನಿಗೆ ಸಪ್ತಾಹದಲ್ಲೇ ಮೋಕ್ಷಯೋಗವನ್ನು ಒದಗಿಸಿಕೊಟ್ಟ ಮಹಾಪುರಾಣವೇ ಶ್ರೀಭಾಗವತವು. ಶ್ರೀಭಾಗವತಾಮೃತಪಾನ ಮಾಡುವ ಮಾಡಿಸುವ ಭಗವದ್ಭಕ್ತರ ಭಾಗ್ಯಕ್ಕೆ ಎಣೆಯುಂಟೆ?

ಶ್ರೀಮದ್ಭಾಗವತ ಪ್ರವಚನ ಮಾಡಿ ಭಾಗವತವನ್ನು ಅಸ್ಥಿಗತ ಮಾಡಿಕೊಂಡ ಮಹಾಸುಕೃತಿಗಳೇ ಕಥಾನಾಯಕರಾದ ಶ್ರೀ ಯಾದವಾರ್ಯರು! ಇವರು ದೇವಾಂಶ ಸಂಜನಿತರು. ಶ್ರೀ ರಾಘವೇಂದ್ರ ಗುರುಸಾರ್ವಭೌಮರ ಸುಧಾನುವಾದವನ್ನು ಕೇಳಿದ ಮಹಾ ಸುಕೃತಿಗಳು! ಈ ಮಹಾತ್ಮರ ಚರಿತಾಮೃತವನ್ನು ಮುದ್ರಿಸಲು ಮುಂದೆ ಬಂದ ಡಾಕ್ಟರ್ ಶ್ರೀ ಮಾಧವರಾಯರು ನಿಜವಾಗಿಯು ಸುಕೃತಿಗಳು. ಪ್ರಕಾಶಕರಿಗೂ, ಮುದ್ರಣ ದ್ರವ್ಯ ಸಹಾಯ ಮಾಡಿದ ಭಕ್ತರಿಗೂ ಶ್ರೀ ಯಾದವಾರ್ಯರು ಮಂಗಳವನ್ನುಂಟು ಮಾಡಲೆಂದು ಪ್ರಾರ್ಥಿಸುವೆನು!

ಗೌರೀಬಿದನೂರು
ನವೆಂಬರ್ 30, 1972

ವಿದ್ವಜ್ಜನ ವಿಧೇಯ,
ಜೆ. ಹೆಚ್. ಬಿ. ಆಚಾರ್ಯ

ಮುದ್ರಣ ದ್ರವ್ಯ ಸಹಾಯ ಮಾಡಿದ ಭಕ್ತರು

ಶ್ರೀಮತಿ ಶೇಷಮ್ಮ ವೆಂಕಟರಮಣರಾವ್
ಮಲ್ಲೇಶ್ವರ, ಬೆಂಗಳೂರು-3

ಶ್ರೀ ಎನ್. ಕೆ. ವ್ಯಾಸರಾವ್
ಶ್ರೀರಾಮಪುರ, ಬೆಂಗಳೂರು-21

ಶ್ರೀ ಹೆಚ್. ಸುಬ್ಬರಾಯಪ್ಪ
ಹಂಪಸಂದ್ರ, ಗೌರೀಬಿದನೂರು

ಶ್ರೀ ಹೆಚ್. ಹನುಮಂತಾಚಾರ್ಯ
ಟ್ರಿಪ್ಲಿಕೇನ್, ಮದರಾಸು-5

॥ ಶ್ರೀರಸ್ತು ॥

ಶ್ರೀ ಶ್ರೀ ಯಾದವಾರ್ಯರು

ಮೂಕೋಪಿಯತ್ಪ್ರಸಾದೇನ
ಮುಕುಂದ ಶಯನಾಯತೇ
ರಾಜರಾಜಾಯತೇ ರಿಕ್ತೋ
ರಾಘವೇಂದ್ರಂ ತಮಾಶ್ರಯೇ ॥

ಶ್ರೀ ಯಾದವಾರ್ಯರು ವಿಶಾಲ ಕರ್ನಾಟಕದ, ವಿಜಾಪುರ ಜಿಲ್ಲೆಯ **ಖೇಡಮಣೂರು** ಗ್ರಾಮದಲ್ಲಿ ಜನಿಸಿದರು. ಚಿನಿವಾರಿಕೆಯಿಂದ ಜೀವಿಸುತ್ತಿದ್ದ **ರಾಘಪ್ಪ ನಾಯಕನೇ** ಇವರ ತಂದೆ. ಯಾದವಾರ್ಯರ ಅಗ್ರಜರಾದ **ಪುರುಷೋತ್ತಮ ನಾಯಕರು** ಶ್ರೀ ವೇದವ್ಯಾಸ ತೀರ್ಥರಲ್ಲಿ ವ್ಯಾಸಂಗ ಮಾಡಿ ಅವರಿಂದಲೇ ಆಶ್ರಮವನ್ನು ಪಡೆದು **ವೇದೇಶ ತೀರ್ಥರಾಗಿ** ಪ್ರಸಿದ್ಧಿಗೆ ಬಂದರು. ಶ್ರೀ ರಾಘವೇಂದ್ರ ಗುರುಸಾರ್ವಭೌಮರಿಂದ '**ತೀರ್ಥ**' ಎಂಬ ಬಿರುದನ್ನು ಪಡೆದ ಮಹಾ ಸುಕೃತಿಗಳಾದ ಬಿದರುಹಳ್ಳಿಯ ಶ್ರೀನಿವಾಸಾ ಚಾರ್ಯರ ತೀರ್ಥರೂಪರಾದ **ಕೃಷ್ಣಪ್ಪ ನಾಯಕರು** ಯಾದವಾರ್ಯರ ಅಣ್ಣಂದಿರು. ಜನಿಸಿದ ಮೂವರು ಮಕ್ಕಳು ಪ್ರತಿಭಾಶಾಲಿಗಳಾಗಿ ಕೀರ್ತಿ ಗಳಿಸಿ ದರು. ಇವರನ್ನು ಪಡೆದ ರಾಘಪ್ಪ ನಾಯಕರ ಸುಕೃತವೇನೆಂದು ವರ್ಣಿಸೋಣ !

ಚೋರರಿಗೆ ದೇವರ ದರ್ಶನ

ಕಥಾನಾಯಕರಾದ ಯಾದಪ್ಪ ನಾಯಕನಿಗೆ, ಚೌಲೋಪನಯನಾದಿ ವಿಧ್ಯುಕ್ತ ಕರ್ಮಗಳು ತತ್ತತ್ಕಾಲದಲ್ಲಿ ನಡೆದವು. ಶ್ರೀ ಪ್ರಹ್ಲಾದರಾಜರನ್ನು ಮತ್ತು

ಶ್ರೀ ಧ್ರುವರಾಜರನ್ನು ಕಾಪಾಡಿದಂತೆ ಶ್ರೀ ಯಾದವಾರ್ಯರನ್ನೂ ಶ್ರೀ ಹರಿಯು ಬಾಲ್ಯದಿಂದಲೇ ರಕ್ಷಣೆ ಮಾಡಿದನು. ಭಗವಂತನು ಭಕ್ತವತ್ಸಲನಲ್ಲವೇ? ಒಂದು ದಿನ ಯಾದವಾರ್ಯರು ಪಕ್ಕದ ಹಳ್ಳಿಗೆ ಸಂತೆಗಾಗಿ ಹೊರಟಿದ್ದರು. ದಾರಿಯಲ್ಲಿ ದಾರಿಗಳ್ಳರು ಅಡ್ಡ ಬಂದರು. ಯಾದವಾರ್ಯರನ್ನು ಸುಲಿಗೆ ಮಾಡಲು ಸುತ್ತುಗಟ್ಟಿದರು. ಆದರೆ, ಅವರಿಗೆ ಮುಂಭಾಗದಲ್ಲಿ **ಶ್ರೀ ನೃಸಿಂಹ ದೇವರು,** ಹಿಂಬದಿಯಲ್ಲಿ **ಶ್ರೀ ಕೃಷ್ಣನು** ಮತ್ತು ಎಡಬಲದಲ್ಲಿ **ಶ್ರೀರಾಮ ಲಕ್ಷ್ಮಣರು** ಧನುರ್ಧಾರಿಗಳಾಗಿ ಯಾದವಾರ್ಯರನ್ನು ರಕ್ಷಣೆ ಮಾಡುತ್ತಿರುವುದನ್ನು ಕಂಡು ಚೋರರು ಭಯಭ್ರಾಂತರಾದರು. ಯಾದವಾರ್ಯರಿಗೆ ನಮಸ್ಕಾರ ಮಾಡಿ ವಿಷಯವನ್ನು ತಿಳಿಸಿದರು.

" ತಪೋನಿಷ್ಠಾಗರಿಷ್ಠರಾದ ಪರಮಹಂಸರಿಗೆ ಪರಮಾತ್ಮನ ಸಾಕ್ಷಾತ್ಕಾರವಾಗುವುದು ಅಪರೂಪ ! ಆದರೆ ನಿಮಗೆ ಭಗವದ್ದರ್ಶನವಾಯಿತು ! ನೀವೇ ಸುಕೃತಿಗಳು ".

ಎಂಬುದಾಗಿ ಆ ಕಳ್ಳರಿಗೆ ಯಾದವಾರ್ಯರು ತಿಳಿಸಿದರು ! ಯಾದವಾರ್ಯರ ಮಹಿಮೆಗೆ ಬೆರಗಾಗಿ ಆ ಕಳ್ಳರು, ಇನ್ನು ಮುಂದೆ ಕಳುವು, ದರೋಡೆ ಮಾಡುವುದನ್ನು ಬಿಟ್ಟು ಬಿಡುವುದಾಗಿ ಪ್ರಮಾಣಮಾಡಿ ಯಾದವಾರ್ಯರ ಪಾದ ಪದ್ಮಗಳಿಗೆ ಪ್ರಣಾಮಮಾಡಿ ಹೊರಟುಹೋದರು.

ವಿದ್ಯಾಭ್ಯಾಸ - ವಿದ್ಯಾದಾನ

ದೇವಾಂಶ ಸಂಭೂತರಾದ ಯಾದವಾರ್ಯರು, ಶಾಸ್ತ್ರಾಭ್ಯಾಸಕ್ಕಾಗಿ ಕಾಶಿಗೆ ಪ್ರಯಾಣ ಮಾಡಿದರು. **ತರ್ಕ, ವ್ಯಾಕರಣ, ಮೀಮಾಂಸಾದಿ** ಶಾಸ್ತ್ರಗಳನ್ನು ಅಭ್ಯಾಸಮಾಡಿ, ಸ್ವಗ್ರಾಮಕ್ಕೆ ಹಿಂದಿರುಗಿದರು. ಘನ ವಿದ್ವಾಂಸರಾದ ಶ್ರೀ ವೇದೇಶ ತೀರ್ಥರಲ್ಲಿ ವೇದಾಂತವನ್ನು ಕಲಿತರು. ಹೀಗೆ ಸರ್ವವಿದ್ಯಾ ಪಾರಂಗತರಾಗಿ, ಗೃಹಸ್ಥಾಶ್ರಮವನ್ನು ಪಡೆದರು.

ಯಾದವಾರ್ಯರ ಶಿಷ್ಯ ಸಂಪತ್ತು ವೃದ್ಧಿಯಾಯಿತು ! ಸಚ್ಛಾಸ್ತ್ರ ಪ್ರವಚನನಿರತರಾದ ಯಾದವಾರ್ಯರು ಏಕಾಂತ ಸ್ಥಲವನ್ನಪೇಕ್ಷಿಸಿ, ಮಲಪ್ರಭಾ ನದೀತೀರಕ್ಕೆ ಹೊರಟರು. ಅಶ್ವತ್ಥ ವೃಕ್ಷದ ಕೆಳಗೆ ಕಟ್ಟೆಯ ಮೇಲೆ ಕುಳಿತರು.

ಅಲ್ಲಿಯೇ ನಿಧಿ ಲಭಿಸಿತು. ಅದನ್ನು ತೃಣಪ್ರಾಯವಾಗಿ ಕಂಡರು. ತಮ್ಮ ತಪಸ್ಸಿಗೆ ತೊಂದರೆಯಾಗಬಾರದೆಂದು ಅಲ್ಲಿಂದ ಪಂಢರಾಪುರಕ್ಕೆ ಪಯಣ ಮಾಡಿದರು.

ಶ್ರೀಮದ್ಭಾಗವತ ಪುರಾಣ

ಪಂಢರಾಪುರದಲ್ಲಿ ಯಾದವಾರ್ಯರಿಗೆ ಪಾಂಡುರಂಗಿ ಕೇಶವಾಚಾರ್ಯರ ಪರಿಚಯವಾಯಿತು ! ಆಚಾರ್ಯರು ಯಾದವಾರ್ಯರ ಪಾಂಡಿತ್ಯ ಪ್ರತಿಭೆಗಳನ್ನು ಕುರಿತು ಕೇಳಿದ್ದರು. ಈಗ ಅವರ ದರ್ಶನ ಲಾಭವಾಯಿತು ! ಆರ್ಯರ ಬಗ್ಗೆ ಆಚಾರ್ಯರಿಗೆ ಗೌರವಾದರಾಭಿಮಾನಗಳು ಹೆಚ್ಚು. ಆದರೆ ಘನ ವಿದ್ವಾಂಸ ರಾದ ಆಚಾರ್ಯರಿಗೆ ಶ್ರೀ ಭಾಗವತದ ಬಗ್ಗೆ ತಾತ್ಸಾರ ಬುದ್ಧಿಯಿದ್ದಿತು ! ಭಾಗವತವು ಕೇವಲ ಮಹಿಳೆಯರಿಗಾಗಿ ಹೇಳಬೇಕಾದ ಪುರಾಣವೆಂದಿಷ್ಟೆ ತಿಳಿ ದಿದ್ದರು. ಇದನ್ನರಿತ ಯಾದವಾರ್ಯರು, ಆಚಾರ್ಯರಿಗೆ ಶ್ರೀ ಮದ್ಭಾಗವತಾವ ಲೋಕನ ಮಾಡಬೇಕೆಂಬುದಾಗಿ ಪದೇ ಪದೇ ಹೇಳುತ್ತಿದ್ದರು. ಆದರೂ, ಆಚಾರ್ಯರು ಭಾಗವತವನ್ನವಲೋಕಿಸುವ ಪ್ರಯತ್ನ ಮಾಡಲಿಲ್ಲ.

ಮಹಾ ವಿದ್ವಾಂಸರಾದ ಕೇಶವಾರ್ಯರ ತಾಯಿಯವರು ಪ್ರತಿದಿನ ಶ್ರೀಭಾಗ ವತಸತ್ಕಥಾಮೃತ ಪಾನಮಾಡದೇ ಭೋಜನ ಮಾಡುತ್ತಿರಲಿಲ್ಲ. ಒಂದು ದಿನ ಆಚಾರ್ಯರ ಶಿಷ್ಯರು ಯಾರೂ ದೊರೆಯದೇ ಪುರಾಣ ಹೇಳುವವರಿಲ್ಲದಾಗಿ, ಅವರ ತಾಯಿಯವರು ಭೋಜನ ಮಾಡದೇ ಕುಳಿತುಬಿಟ್ಟಿರು. ಅಂದು ಶ್ರೀ ಆಚಾರ್ಯರೇ ಭಾಗವತ ಪುರಾಣ ಪ್ರವಚನ ಮಾಡಿ ಮುಗಿಸಿದರು. ಶ್ರೀಮದಾಚಾರ್ಯರ ಕೃತಿಯನ್ನು, ಶ್ರೀ ವಿಜಯಧ್ವಜರ ಟಿಪ್ಪಣಿಗಳನ್ನು ಅವ ಲೋಕಿಸಿ ಶ್ರೀ ಭಾಗವತಾಮೃತ ಪಾನಮಾಡಿ, ಮಾಡಿಸಿದರು. ಪುರಾಣವು ಹೀಗೆ ಕೆಲವು ದಿನ ಮುಂದುವರಿಯಿತು. ಒಂದು ದಿನ ಪುರಾಣ ಕಾಲಕ್ಕೆ, ಅಲ್ಲಿಗೆ ಶ್ರೀ ಯಾದವಾರ್ಯರು ದಯಮಾಡಿಸಿದರು. ಆಗ ಕೇಶವಾಚಾರ್ಯರು ಎದ್ದು ನಿಂತು, ಯಾದವಾರ್ಯರನ್ನು ನಮಸ್ಕಾರ ಪೂರ್ವಕ, ಆದರದಿಂದ ಸ್ವಾಗತಿಸಿ ದರು. ಯಾದವಾರ್ಯರು ಆನಂದದಿಂದ ಶ್ರವಣ ಮಾಡಿದರು. ಇಬ್ಬರಿಗೂ ಆನಂದವಾಯಿತು !

ಬಾದರಾಯಣರು ನೋದಪಟ್ಟರು

ಶ್ರೀ ಯಾದವಾರ್ಯರು ಪಂಢರಾಪುರದಿಂದ '**ಎಕ್ಕುಂಡಿ**'ಗೆ ಬಂದರು. ಅಲ್ಲಿ ಮಲಪ್ರಭಾ ನದೀತೀರದಲ್ಲಿ ಶ್ರೀ ಸುಧಾ ಪಾಠವನ್ನು ಹೇಳಿದರು. **ಶ್ರೀ ಬಾದರಾಯಣ** ವಿಗ್ರಹವನ್ನು ನಿರ್ಮಾಣ ಮಾಡಿ ಸುಧಾಪ್ರವಚನ ಮಾಡುತ್ತಾ ೧೦೮ ಸಲ ಶ್ರೀ ಬಾದರಾಯಣರಿಗೆ ಅಭಿಷೇಕವನ್ನು ಮಾಡಿರುತ್ತಾರೆ! **ಕರಾವಲಂಬನಸ್ತೋತ್ರ**ವನ್ನು ರಚಿಸಿ ಪಠಿಸಿದಾಗ ಆ ಬಾದರಾಯಣ ಮೂರ್ತಿಯು ನಡೆದು ಬಂದು ಯಾದವಾರ್ಯರಿಗೆ ಹಸ್ತಲಾಘವನ್ನಿತ್ತಿತಂತೆ. ಯಾದವಾರ್ಯರ ಬಾಯಿಂದ ಸರ್ವಜ್ಞ ಶಾಸ್ತ್ರವು ಬಂದೊಡನೆ ಆ ವಿಗ್ರಹವು ಶಿರಃ ಕಂಪನ ಮಾಡುತ್ತಿತ್ತೆಂಬರು! ಯಾದವಾರ್ಯರ ಪೂಜೆಯನ್ನು ಸ್ವೀಕರಿಸಿ ಶ್ರೀ ಬಾದರಾಯಣರು ನೋದಪಟ್ಟರು. ಇದು ಸಾಮಾನ್ಯ ಭಾಗ್ಯವೇ?

ಮಂತ್ರಸಿದ್ಧಿಯನ್ನು ಪಡೆದರು

ಶ್ರೀ ಯಾದವಾರ್ಯರು ಕೆಲಕಾಲ ಬಿದುರುಹಳ್ಳಿಯಲ್ಲಿ ವಾಸವಾಗಿದ್ದರು. ಅಣ್ಣನ ಮಗನಾದ ಶ್ರೀನಿವಾಸಾಚಾರ್ಯರು ಯಾದವಾರ್ಯರಲ್ಲಿ ಶಾಸ್ತ್ರಾಭ್ಯಾಸಕ್ಕಾಗಿ ಬಂದರು. ವ್ಯಾಸಂಗವು ನಡೆದಿತ್ತು. ಆಗ ಒಂದು ದಿನ ಯಾದವಾರ್ಯರು ತಮ್ಮ ಮಗನಿಗೆ ಶ್ರೀ ಹಯಗ್ರೀವ ಮಂತ್ರದಿಂದ ಅಭಿಮಂತ್ರಿಸಿದ ಜಲವನ್ನು ಕುಡಿಯಲು ಕೊಟ್ಟರು. ಆದರೆ ಆ ಬಾಲಕನು ಆ ಜಲವನ್ನು ತಮ್ಮ ಪರ್ಣಶಾಲೆಯ ಗೂಟಕ್ಕೆ (ಒಣಗಿದ ಕಂಭಕ್ಕೆ) ಎರಚಿದನು. ಹೀಗೆ ಮೂರುದಿನಗಳು ಉರುಳಿದವು. ಒಣಗಿದ ಕಂಬವು ಚಿಗುರಿತು! ಇದನ್ನು ನೋಡಿದ ಶ್ರೀನಿವಾಸಾಚಾರ್ಯರು ಮರುದಿನದಿಂದ ಅಭಿಮಂತ್ರಿಸಿದ ಜಲವನ್ನು ಆ ಬಾಲಕನಿಂದ ತೆಗೆದುಕೊಂಡು ತಾವೇ ಪಾನಮಾಡಿದರು. ಸಪ್ತಾಹವು ಮುಗಿಯಿತು! ಮರುದಿನ ಯಾದವಾರ್ಯರು ತೇಜಃಪುಂಜನೂ, ವಿಜ್ಞಾನಿಯೂ ಆದ ಶ್ರೀನಿವಾಸಾಚಾರ್ಯ ಮುಖಾವಲೋಕನ ಮಾಡಿ, ತಮ್ಮ ಬಾಲಕನು ಎಂದಿನಂತೆ ಇರುವುದನ್ನು ನೋಡಿ, ವಿಚಾರಿಸಿ, ವಿಷಯವನ್ನರಿತು, ಆಚಾರ್ಯರ ಸುಕೃತಕ್ಕೆ ಸಂತಸಪಟ್ಟರು. ಶ್ರೀಮದಾಚಾರ್ಯರ ಸಚ್ಛಾಸ್ತ್ರಕ್ಕೆ ಟಿಪ್ಪಣಿಗಳನ್ನು ರಚಿಸಲು ಅಪ್ಪಣೆಮಾಡಿದರು.

ಅನಂತರ ಶ್ರೀನಿವಾಸಾಚಾರ್ಯರು ಅನೇಕ ಟಿಪ್ಪಣಿಗಳನ್ನು ರಚಿಸಿ, ಶ್ರೀಮನ್ಮಂತ್ರಾಲಯ ಪ್ರಭುಗಳಿಂದ ಅಭಿನಂದನೀಯರಾದರು. ಅವರಿಂದ '**ತೀರ್ಥ**' ಎಂಬ ಬಿರುದನ್ನು ಪಡೆದರು.

ವೈರಾಗ್ಯ ಮೂರುತಿ

ದಾರಿದ್ರ್ಯವು ಮರಣಕ್ಕಿಂತಲೂ ದಾರುಣವಾದುದು. ಯಾಚ್ಞಾವೃತ್ತಿಯು ನಿಕೃಷ್ಟವಾದುದು. ಹೀಗಿದ್ದರೂ ನ ವ ಕೋ ಟಿ ನಾರಾಯಣನೆನಿಸಿಕೊಂಡ ಕೃಷ್ಣಪ್ಪ ನಾಯಕನು, ತನ್ನ ಸರ್ವಸ್ವವನ್ನೂ ದಾನಮಾಡಿ ಪುರಂದರದಾಸನಾದನು. ದಾರಿದ್ರ್ಯವನ್ನೇ ಬಯಸಿದನು. ಭಿಕ್ಷಾಟನೆಯನ್ನೇ ಮಾಡಿ ಸುಖದಿಂದಿದ್ದನು. ಪರಮ ವೈರಾಗ್ಯಶಾಲಿಗಳ ವರ್ತನೆಯೇ ಸೋಜಿಗವಾದುದು.

ಯಾದವಾರ್ಯರು ಸಹ ದಾರುಣವಾದ ದಾರಿದ್ರ್ಯವನ್ನನುಭವಿಸಿದರು. ಶ್ರೀಹರಿಯನ್ನು ಪ್ರಾರ್ಥಿಸಿದರು. ನರರನ್ನು ಬೇಡಲಿಲ್ಲ. ಆದರೆ ಶಿಷ್ಯಪೋಷಣೆಯು ಕಷ್ಟವೆನಿಸಿತು ! ದೇಹ ಪೋಷಣೆಗೆ ಸಾಕಷ್ಟು ಆಹಾರವಿಲ್ಲದಿರಲು, ಶರೀರ ಸತ್ವವು ತಗ್ಗಿತು. ಗ್ರಂಥಾವಲೋಕನೆ ಮಾಡುವುದು ಸಾಧ್ಯವಾಗಲಿಲ್ಲ. ಹೀಗಿರಲು ಒಂದು ದಿನ ಶ್ರೀನಿವಾಸತೀರ್ಥರಿಂದ ಪ್ರಾರ್ಥಿತರಾಗಿ ಸಾಂಗ್ಲಿ ರಾಜನಾದ **ಕೃಷ್ಣರಾಜನಿಗೆ** ಈ ರೀತಿ ಪತ್ರ ಬರೆದು ಕಳಿಸಿದರು.

"ಹೇ ! ರಾಜನ್ ! ಶ್ರೀಮಧ್ವಮತದ ಪ್ರಾಶಸ್ತ್ಯವನ್ನು ಕೇಳು ! ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ಸರ್ವಮೂಲ ಕೃತಿಗಳ ಒಂದಕ್ಷರವನ್ನು ಭಕ್ತಿಪೂರ್ವಕ ಬರೆದವನಿಗೆ ಶ್ರೀಗಂಗಾ ತೀರದಲ್ಲಿ ಶ್ರೀವಿಷ್ಣು ಮಂದಿರವನ್ನು ಕಟ್ಟಿಸಿದ ಫಲವು ಪ್ರಾಪ್ತವಾಗುವುದು. ಅಂದಮೇಲೆ ಶ್ರೀಮದಾಚಾರ್ಯರ ಕೃತಿರತ್ನಗಳ ಪಠನ, ಪಾರಾಯಣ ಮಾಡುವವರ ಪುಣ್ಯವೆಷ್ಟೆಂದು ವರ್ಣಿಸೋಣ ! ಈ ಸತ್ಕಾರ್ಯಕ್ಕೆ ನೆರವಾಗುವ ಸಜ್ಜನರ ಭಾಗ್ಯವು ಪ್ರಶಂಸನೀಯವಾದುದು. ಅಂತಹ ಸುಸಮಯ, ನಿನಗೀಗ ಪುರಾಕೃತ ಸುಕೃತ ವಿಶೇಷದಿಂದ ಪ್ರಾಪ್ತವಾಗಿದೆ ! ಜಾಗೃತನಾಗು."

ಎಂಬ ಪತ್ರವನ್ನು ಓದಿ, ರಾಜನು, ಗುರುಸೇವೆಗೆ ಸಿದ್ಧನಾಗಿ, ಗುರ್ವಾಜ್ಞೆಯನ್ನು ತಿಳಿಯಲು ಬಂದು, ವಿನಯ ವಿನಮಿತಗಾತ್ರನಾಗಿ, ವಿಜ್ಞಾಪಿಸಿಕೊಂಡನು. ಧನಕನಕಾದ್ಯಾಭರಣಗಳನ್ನರ್ಪಿಸಲು ಮುಂದೆ ಬಂದನು. ವೈರಾಗ್ಯ ಮೂರ್ತಿಗಳಾದ ಶ್ರೀ ಯಾದವಾರ್ಯರೇನನ್ನು ಸ್ವೀಕರಿಸಲಿಲ್ಲ. ತಮಗೆ ಶ್ರೀ ಮಧ್ವಾಚಾರ್ಯರ ಸೇವೆಗೆ ಅಗತ್ಯವಾದಷ್ಟು ಎಂದರೆ ಪ್ರತಿದಿನ ಒಂದು ಸೇರು 'ಜೋಳದ ನುಚ್ಚು' ಮಾತ್ರ ಕಳಿಸಲು ಅಪ್ಪಣೆಯಿತ್ತರು. ಯಾದವಾರ್ಯರ ವೈರಾಗ್ಯಕ್ಕೆ ರಾಜನು ಬೆರಗಾಗಿ, ಅವರ ಇಚ್ಛೆಯಂತೆ ನಡೆಯಲು ಅಪ್ಪಣೆ ಪಡೆದು ಮರಳಿಹೋದನು. ರಾಜನು ತರುವಾಯ, ಆ ಗ್ರಾಮದ ಕುಲಕರ್ಣಿಯನ್ನು ಕರೆದು, ಶ್ರೀ ಯಾದವಾರ್ಯರಿಗೆ ವಂಶಪಾರಂಪರ್ಯವಾಗಿ ಜೋಳದ ಅನುಕೂಲವಿರಲೆಂದು, ಯಾದವಾರ್ಯರಿಗೆ ಸಾಕಷ್ಟು ಭೂದಾನ ಮಾಡಿರುತ್ತಾನೆ. ಅಂದಿನಿಂದ ಯಾದವಾರ್ಯರಿಗೆ **ನುಚ್ಚಿನ ಆಚಾರ್ಯ**ರೆಂಬ ಹೆಸರು ಬಂದಿತು! ಪರಮ ವೈರಾಗ್ಯ ಮೂರುತಿಗಳೆಂಬುದಾಗಿ, ಜನರಿಗೆ ತಿಳಿದು ಬಂದಿತು!

ಪರಿಮಳಕ್ಕೆ ಪ್ರಾಶಸ್ತ್ಯ

ಒಮ್ಮೆ ಶ್ರೀ ಯಾದವಾರ್ಯರು ತಿರುಪತಿಗೆ ಪಯಣವಾದರು. ಶ್ರೀನಿವಾಸನ ದರ್ಶನ ಪಡೆದರು. ದೇವಾಲಯದಲ್ಲಿ ಓರ್ವ ಆಚಾರ್ಯರಿಂದ ಸುಧಾನುವಾದವು ನಡೆದಿತ್ತು. ಯಾದವಾರ್ಯರು ಕುಳಿತು ಕೇಳಿದರು. ಒಂದಡೆ ಆಚಾರ್ಯರಿಗೆ ಅರ್ಥವು ಭಾಸವಾಗಲಿಲ್ಲ. ಶಿಷ್ಯರಿಂದ ಪರಿಮಳ ಮಹಾಕೃತಿಯನ್ನು ತರಿಸಿ ನೋಡಿದರು. ಟಿಪ್ಪಣಿ ಸರಿಯಾಗಿಲ್ಲವೆಂದು ಟೀಕೆ ಮಾಡಿದರು. ಪರಿಮಳಾಚಾರ್ಯರ ಬಗ್ಗೆ ತಾತ್ಸಾರ ಬುದ್ಧಿಯಿಂದ ಮಾತನಾಡಿದರು. ಅದನ್ನು ಕೇಳಿ ಗುರುನಿಂದೆಯನ್ನು ಸಹಿಸಲಾಗದೇ ಯಾದವಾರ್ಯರು ಆಚಾರ್ಯರನ್ನು ಆಕ್ಷೇಪಿಸಿ ದಂಡಿಸಿದರು. ಅವರ ಕೋರಿಕೆಯ ಮೇರೆಗೆ ಯಾದವಾರ್ಯರು ಸುಧಾನುವಾದ ಮಾಡಿದರು.

ಮಂತ್ರಾಲಯ ಪ್ರಭುಗಳ ಮಹಾಮಹಿಮೆಯನ್ನರಿಯದ ಮಂದಮತಿಗಳು ಮಾತನಾಡುವುದು ಮಹದಪರಾಧವೆಂದರು. ಗುರುನಿಂದೆಯನ್ನು ಕೇಳುವುದು, ಸಹಿಸುವುದು ಸಹಾ ಅಪರಾಧವೆನಿಸುತ್ತದೆ!

ಪರಿಮಳ ಮಹಾಕಾವ್ಯದ ಹಿರಿಮೆಯನ್ನರಿಯಂದ ಪಂಡಿತರು, ಸುಧಾನುವಾದ ಮಾಡುವುದೇಕೆ ? ಎಂಬುದಾಗಿ ಆ ಪಂಡಿತರನ್ನು ಜಾಗೃತಗೊಳಿಸಿ ಪರಿಮಳಾ ಚಾರ್ಯರಲ್ಲಿ ತಮಗಿರುವ ಗೌರವಾದರಾಭಿಮಾನಗಳನ್ನೇ ತೋರಿದರು ಯಾದವಾರ್ಯರು. ಆಗ ಆಚಾರ್ಯರು, ತಮ್ಮ ಅಪರಾಧವನ್ನು ಕ್ಷಮಿಸಬೇಕೆಂಬು ದಾಗಿ ಶ್ರೀ ಯಾದವಾರ್ಯರಲ್ಲಿ ವಿಜ್ಞಾಪಿಸಿಕೊಂಡರು.

ಶ್ರೀ ಮುಷ್ಣಯಾತ್ರೆ

ಯಾದವಾರ್ಯರು ತಿರುಪತಿಯಿಂದ ಹಿಂದಿರುಗುವಾಗ ಶ್ರೀ ಮುಷ್ಣದಲ್ಲಿ ತಂಗಿದರು. ಶ್ರೀ ಮುಷ್ಣದ ಆಚಾರ್ಯರ ಮನೆಯಲ್ಲಿ ಶ್ರೀಸುಧಾಮಂಗಳ ಮಹೋತ್ಸವವು ನಡೆದಿತ್ತು. ಶ್ರೀ ಸುಧಾ ಟಿಪ್ಪಣೀಕಾರರೇ ಬಂದದು ಆಚಾರ್ಯರಿಗೆ ಪರಮಾನಂದವನ್ನುಂಟು ಮಾಡಿತು. ಅಲ್ಲಿಯ ರಾಜನಿಗೆ ಕಾಹಿಲೆ ಆಗಿ ನರಳುತ್ತಿದ್ದನು. ವೈದ್ಯಕೀಯ ಚಿಕಿತ್ಸೆಗಳಿಂದ ಪ್ರಯೋಜನವಾಗಲಿಲ್ಲ. ಆ ರಾತ್ರಿ ಯಾದವಾರ್ಯರು ಸ್ವಪ್ನದಲ್ಲಿ ರಾಜನ ಮೈಮೇಲೆ ವರಾಹವನ್ನು ಬಿಡುತ್ತಾರೆ ! ವರಾಹವು ವ್ರಣವನ್ನು ತಿಂದು ರಾಜನ ನೋವನ್ನು ಕಳೆಯುತ್ತದೆ ! ರಾಜನು ಸುಖನಿದ್ರೆಯನ್ನು ಮಾಡುತ್ತಾನೆ ! ಮರುದಿನ ರಾಣಿಯವರ ಪ್ರಾರ್ಥನಾನುಸಾರ, ಆಚಾರ್ಯರನ್ನು ಯಾದವಾರ್ಯರನ್ನು ರಾಜನು ತನ್ನ ಆಸ್ಥಾನಕ್ಕೆ ಆಹ್ವಾನಿಸಿ ಸತ್ಕರಿಸುತ್ತಾನೆ ! ಆಚಾರ್ಯರು, ರಾಜನಿಗೆ ಯಾದವಾರ್ಯರು ದೇವಾಂಶಜರೆಂದು, ಮಹಾತ್ಮರೆಂದು ತಿಳಿಸುತ್ತಾರೆ ! ಅವರ ಸೇವೆಯನ್ನು ಮಾಡಲಿಚ್ಛಿಸಿದ ರಾಜನಿಗೆ ಯಾದವಾರ್ಯರು,

"ಹೇ ! ರಾಜನ್ ! ಆಚಾರ್ಯರಿಗೆ ಮೊದಲಿನಿಂದಾ ನಡೆಸುತ್ತಿದ್ದ, ಧನ, ಧಾನ್ಯಾದಿ ಕಾಣಿಕೆಗಳು ಮತ್ತು ಮುಂದುವರಿಯಲಿ ! ಅವರ ಸರ್ವಜ್ಞರ ಸೇವೆಗೆ ತೊಂದರೆಯಾಗದಿರಲಿ ! ಇದರಿಂದ ನಮಗೆ ತೃಪ್ತಿಯಾಗುವು "ದೆಂದರು. ಆಚಾರ್ಯರಿಗೆ ಕಳುಹಿಸಿ ಕೊಡುತ್ತಿದ್ದ ಆಹಾರ ಸಾಮಗ್ರಿಯನ್ನು ಕಾರಣಾಂತರ ದಿಂದ ಕೆಲಕಾಲ ನಿಲ್ಲಿಸಲಾಗಿದ್ದಿತು ! ಆದರೆ ರಾಜನು ಯಾದವಾರ್ಯರ ಅಪ್ಪಣೆ ಯಂತೆ, ಯಥಾಪೂರ್ವ ಸತ್ಕಾರಗಳೊಂದಿಗೆ ಭೋಜನ ಸಾಮಗ್ರಿಗಳನ್ನು ಸಾದರ ದಿಂದ ಕಳುಹಿಸಿ ಶ್ರೀ ಯಾದವಾರ್ಯರ ಕೃಪೆಗೆ ಪಾತ್ರನಾದನು !

ಶ್ರೀ ರಾಘವೇಂದ್ರರ ಸುಧಾನುವಾದ

ಶ್ರೀ ರಾಘವೇಂದ್ರ ಗುರುಸಾರ್ವಭೌಮರು, ವಿದ್ಯಾಭ್ಯಾಸ ಕಾಲದಲ್ಲೇ ಶ್ರೀ ಸುಧೆಗೆ ಟಿಪ್ಪಣಿಯನ್ನು ರಚಿಸಿ **ಪರಿಮಳ**ವೆಂಬ ಹೆಸರನ್ನಿಟ್ಟರು. ಗುರು ಸುಧೀಂದ್ರರ ಮನ್ನಣೆಯನ್ನು ಪಡೆದ ಶ್ರೀ ಪರಿಮಳವು ಸಕಲ ವಿದ್ವಜ್ಜನಾದರಣೀಯವಾದ ಕೃತಿರತ್ನವಾಗಿದೆ! ಪಿಂಗಳ ಕೋಟಿಗೆ ಸಮೀಪ ಗ್ರಾಮದಲ್ಲಿ ಶ್ರೀ ಪ್ರಾಣದೇವರ ದೇವಸ್ಥಾನದಲ್ಲಿ ಶ್ರೀ ಗುರುರಾಜರಿಂದ ಸುಧಾನುವಾದ ನಡೆಯಿತು! ಶ್ರೀ ಮದುತ್ತರಾದಿ ಮಠಾಧೀಶರಾದ **ಶ್ರೀ ವಿದ್ಯಾಧೀಶ ತೀರ್ಥರೂ** ಆಹ್ವಾನಿತರಾಗಿ ದಿಗ್ವಿಜಯ ಮಾಡಿದ್ದರು. ಉಭಯ ಶ್ರೀ ಪಾದಂಗಳವರು ಪರಸ್ಪರ ಗೌರವಾದರಾಭಿಮಾನದಿಂದ ವರ್ತಿಸಿ ದರು. ಶ್ರೀ ಸುಧಾಮಂಗಳ ಮಹೋತ್ಸವಕ್ಕೆ ಕಥಾನಾಯಕರಾದ ಶ್ರೀ ಯಾದವಾರ್ಯರೂ ಬಂದರು.

ಶ್ರೀ ರಾಘವೇಂದ್ರರ ಸುಧಾನುವಾದವು, ಗಂಗಾ ಪ್ರವಾಹದಂತೆ ನಡೆಯಿತು! ಟಿಪ್ಪಣೀಕಾರರೇ ಅನುವಾದ ಮಾಡುವುದು ಕೇಳಿ ಆನಂದಪಡುವ ಸಜ್ಜನರ ಸುಕೃತ ವಿಶೇಷವೇನೆಂದು ವರ್ಣಿಸೋಣ! ದೇವಾಂಶ ಸಂಜನಿತರಾದ ಮೂವರು ಮಹಾತ್ಮರ ಮಿಲನದಿಂದ ನಡೆದ ಮಂಗಳ ಮಹೋತ್ಸವದಲ್ಲಿ ನೆರೆದಿದ್ದ ಭಕ್ತರೇ ಮಹಾಸುಕೃತಿಗಳು!

ಜ್ಞಾನ-ಭಕ್ತಿ-ವೈರಾಗ್ಯಗಳು ಒಂದೆಡೆ ಸೇರಿದಂತೆ, ಶ್ರೀ ವಿದ್ಯಾಧೀಶರು ಶ್ರೀ ರಾಘವೇಂದ್ರ ತೀರ್ಥರು ಶ್ರೀ ಯಾದವಾರ್ಯರು ಸೇರಿ ಸೌಹಾರ್ದದಿಂದ ವರ್ತಿಸಿದರು!

ಗೀತಾ ವಾಕ್ಯವು ಪ್ರಮಾಣವಲ್ಲವೇ?

ಶ್ರೀ ಯಾದವಾರ್ಯರು ಗೀತಾ ಪ್ರವಚನ ಮಾಡುತ್ತಿದ್ದರು. ಭಕ್ತರ ಯೋಗಕ್ಷೇಮಗಳೆಲ್ಲ ಶ್ರೀ ಭಗವಂತನಿಗೆ ಸೇರಿದವೆಂದು ಹೇಳುವುದಲ್ಲದೆ, ದೃಢ ವಾದ ವಿಶ್ವಾಸವುಳ್ಳ ಯಾದವಾರ್ಯರು ಗೀತಾನುವಾದ ಮಾಡಿ, ದೇವಪೂಜೆಯಲ್ಲಿ ನಿರತರಾದರು. ಪ್ರತಿದಿನ ಭೋಜನ ಸಾಮಗ್ರಿ ಯಾವುದೋ ಒಂದು ವಿಧವಾಗಿ ಲಭಿಸುತ್ತಿತ್ತು. ಒಮ್ಮೆ ಮನೆಯಲ್ಲಿ ಏನೂ ಇಲ್ಲದಿರಲು, ಯಾದವಾರ್ಯರ

ಶ್ರೀಮಂತಿಯುವರು, ನದಿಯ **ಉಸುಗನ್ನೆ** ನೀರಿನಲ್ಲಿ ತೋಯಿಸಿ ನೈವೇದ್ಯಕ್ಕಿಟ್ಟರು. ಶ್ರೀಹರಿಗೆ ನೀವೇದಿತವಾದ ಮೇಲೆ ನೋಡುತ್ತಾರೆ, ಅದು ಶ್ರೀ ಸತ್ಯನಾರಾಯಣ ಪ್ರಸಾದವಾಯಿತು. ಆ ಪ್ರಸಾದವನ್ನು ಶಿಷ್ಯರು ಬಹುಸಂತಸದಿಂದ ಭುಜಿಸುತ್ತಾರೆ!

ಮತ್ತೊಂದು ದಿನ ಶ್ರೀಹರಿಯ ನೈವೇದ್ಯಕ್ಕೆ ಏನೂ ದೊರೆಯದೇ ಶ್ರೀ ಯಾದವಾರ್ಯರಿಗೆ, ಅವರ ಮನೆಯವರು, ಇದ್ದ ವಿಷಯವನ್ನು ವಿಜ್ಞಾಪಿಸಿ ಕೊಳ್ಳುತ್ತಾರೆ! ಯಾದವಾರ್ಯರು ಆಗ ಶ್ರೀ ಗೀತಾ ಶ್ಲೋಕ ಒಂದನ್ನು ಮಸಿಯಿಂದ ಗೀಚಿ ಮನೆಯಿಂದ ಹೊರಟು ಹೋದರು. ತರುವಾಯ ಸ್ವಲ್ಪ ಕಾಲಾನಂತರ **ರಂಗ**ನೆಂಬ ಬಾಲಕನು ಭೋಜನ ಪದಾರ್ಥಗಳನ್ನು ಹೊತ್ತು ತಂದು ಯಾದವಾರ್ಯರ ಹೆಂಡತಿಗೆ ಒಪ್ಪಿಸಿ, ತನ್ನ ಬಾಯಿಂದ ರಕ್ತ ಬರುವುದನ್ನು ತೋರಿ, ಪದಾರ್ಥಗಳು ತರಲು ತಡವಾದುದಕ್ಕೆ ಕುಪಿತರಾಗಿ ಯಾದ್ಯವಾರ್ಯರೇ ಹೊಡೆದರೆಂದು ತಿಳಿಸಿ ಹೊರಟು ಹೋಗುತ್ತಾನೆ! ಅನಂತರದಲ್ಲಿ ಬಂದ ಯಾದವಾರ್ಯರು, ವಿಷಯವನ್ನು ತಿಳಿದು, ಗೀತೆಯಲ್ಲಿ ತಾವು ಕಾಟಿ ಹಾಕಿದ ಶ್ಲೋಕವನ್ನು ಪಠಿಸಿ, ಅರ್ಥವನ್ನು ಹೆಂಡತಿಗೆ ವಿವರಿಸುತ್ತಾರೆ!

ಶ್ರೀ ಭಗವದ್ಗೀತೆಯ ೯ ನೇ ಅಧ್ಯಾಯದ ೨೨ ನೇ ಶ್ಲೋಕದಲ್ಲಿ ಶ್ರೀ ಭಗವಂತನು—

ಅನನ್ಯಾಶ್ಚಿಂತ ಯಂತೋಮಾಂ
ಯೇಜನಾಃ ಪರ್ಯುಪಾಸತೇ
ತೇಷಾಂ ನಿತ್ಯಾಭಿಯುಕ್ತಾನಾಂ
ಯೋಗಕ್ಷೇಮಂ ವಹಾಮ್ಯಹಂ ||

"ಯಾರು ಇತರರನ್ನು ಉಪಾಸನೆ ಮಾಡದೇ ನನ್ನನ್ನೇ ಧ್ಯಾನಿಸುತ್ತಾ ಭಕ್ತಿಯಿಂದಾ ಉಪಾಸನೆ ಮಾಡುತ್ತಾರೊ, ಸರ್ವಕಾಲ, ಸರ್ವಾವಸ್ಥೆಗಳಲ್ಲಿಯೂ, ತ್ರಿಕರಣ ಶುದ್ಧಿಯಾಗಿ ಪರಮಾತ್ಮನಾದ ನನ್ನ ಸೇವೆಯನ್ನು ಮಾಡುವರೋ ಅಂತಹ ಭಕ್ತರ ರಕ್ಷಣೆ, ಪೋಷಣೆಯು ನನ್ನದಾಗಿದೆ!"

ಎಂಬುದಾಗಿ ಅಪ್ಪಣೆ ಕೊಟ್ಟಿರುತ್ತಾನೆ!

ಶ್ರೀ ಗೀತಾದಲ್ಲಿ ಹೀಗೆ ಅಪ್ಪಣೆ ಕೊಟ್ಟ ಪರಮಾತ್ಮನು, ತನ್ನನ್ನೇ ನಂಬಿದ

ಯಾದವಾರ್ಯರಿಗೆ ಒಂದು ದಿನ ಭೋಜನ ಸಾಮಗ್ರಿ ಒದಗಿಸುವುದಕ್ಕೆ ಚಿಂತಿಸಿ, ಆ ಶ್ಲೋಕವನ್ನು ಕಾಟುಹಾಕಿದರು. ಅಂದರೆ ಭಕ್ತವತ್ಸಲನಾದ ಭಗವಂತನಲ್ಲಿ ಶ್ರೀ ಯಾದವಾರ್ಯರಿಗೆ ದೃಢವಾದ ನಂಬಿಕೆ ಇತ್ತೆಂಬುದು ತಿಳಿದು ಬರುವುದೇ ಹೊರತು, ಪರಮ ವೈರಾಗ್ಯಮೂರ್ತಿಗಳಿಗೆ ಬೇಸರವಾಯಿತೆಂಬುದಾಗಿ ಭಾವಿಸ ಬಾರದು. ಶ್ರೀ ಹರಿಯಲ್ಲಿ ದೃಢವಾದ ಭಕ್ತಿ-ವಿಶ್ವಾಸಗಳಿದ್ದುದರಿಂದಲೇ ಶ್ರೀ ಹರಿಯು ರಂಗನ ರೂಪದಿಂದ ಸಾಮಗ್ರಿಗಳನ್ನು ಹೊತ್ತು ತಂದು ತನ್ನ ನಾಲಿಗೆ ಯನ್ನು ಸೀಳಿ, ರಕ್ತವು ಬರುವುದನ್ನು ಶ್ರೀ ಯಾದವಾರ್ಯರ ಮನೆಯವರಿಗೆ ತೋರಿಸಿ, ವಿಷಯವನ್ನು ವಿವರಿಸಿ ಮಾಯವಾದನು. ಪರಮಾತ್ಮನ ದರ್ಶನ ಪಡೆದು, ಅವನೊಡನೆ ಮಾತನಾಡಿದ ಮಡದಿಯು ಮಹಾ ಸುಕೃತಕ್ಕೆ ಮೋದ ಪಟ್ಟ ಮಹಾತ್ಮರು ಶ್ರೀ ಯಾದವಾರ್ಯರು.

ನಿಗ್ರಹಾನುಗ್ರಹ ಶಕ್ತರು

ಮಹಾತ್ಮರ ನಡೆ-ನುಡಿಗಳು ವಿಚಿತ್ರವಾಗಿರುವುದು ಕಂಡುಬಂದಿದೆ. ಸಾಮಾನ್ಯರಿಗೆ ಅದರ ನಿಜಸ್ಥಿತಿ ಅರ್ಥವಾಗದು. ಯಾದವಾರ್ಯರು **ಮಾನಸ ಪೂಜಾಸಕ್ತ**ರಾಗಿ ಪ್ರಭಾತ ಸಮಯದಲ್ಲಿ ತಡವಾಗಿ ಏಳುತ್ತಿದ್ದರು. ಅವರ ಅಕ್ಕನವರಾದ **ವೆಂಕೂಬಾಯಿಯು** ಆರ್ಯರನ್ನಾಕ್ಷೇಪಿಸುತ್ತಾರೆ. ಯಾದವಾರ್ಯ ರೊಂದು ಸಾಧನ ದ್ವಾದಶಿಯ ದಿನ ತೀರ್ಥಕ್ಕೆಂದು ವೆಂಕೂಬಾಯಿಯವರನ್ನು ತಮ್ಮ ಶಿಷ್ಯರಾದ **ತುಲಸೀದಾಸ**ರಲ್ಲಿಗೆ ಕಳುಹಿಸುತ್ತಾರೆ.

ತುಲಸೀದಾಸರು ದಿಗ್ದಂತಿ ಪಂಡಿತರಿದ್ದು ಯಾದವಾರ್ಯರ ಸೇವೆಯನ್ನು ಮಾಡಿ, ತಮಗೆ ಮುಂದೆ ಹನ್ನೆರಡು ಜನ್ಮಗಳಲ್ಲಿ ಮ್ಲೇಂಛನಾಗಿ ಹುಟ್ಟುವುದನ್ನು ತೊಲಗಿಸಿ ಕಾಪಾಡಬೇಕೆಂದು ಯಾದವಾರ್ಯರಲ್ಲಿ ವಿಜ್ಞಾಪಿಸಿಕೊಳ್ಳುತ್ತಾರೆ ! ಯಾದವಾರ್ಯರು ಹೇಳಿದಂತೆ ನಿತ್ಯ ಆಹ್ನೀಕ ಮುಗಿಸಿಕೊಂಡು ಲುಂಗಿಯನ್ನುಟ್ಟು ಹೊಂಡದಲ್ಲಿ ಒಂದು ಗಂಟೆಕಾಲ ಕುಳಿತು ಬರುತ್ತಿದ್ದರು. ದಾಸರು ಲುಂಗಿ ಯನ್ನು ಸುತ್ತಿಕೊಳ್ಳುತ್ತಿರುವುದನ್ನು ತೀರ್ಥಕ್ಕಾಗಿ ಬಂದ ವೆಂಕೂಬಾಯಿಯವರು ನೋಡಿದರು. ಅವರು ಕೊಟ್ಟ ತೀರ್ಥವನ್ನು ಕೈಗೆ ಒರಸಿಕೊಂಡು, ವೆಂಕೂ ಬಾಯಿ ಹಿಂದಿರುಗಿದಳು. ಮರಳಿಬಂದ ಅಕ್ಕನನ್ನು ಕಂಡ ಯಾದವಾರ್ಯರು,

ಅಕ್ಕಾ ! ನಿನಗೆ ಮೈಲಿಗೆಯಾಗಿದೆ ಎಂದು ಎಚ್ಚರಿಸಿದರು. ವೆಂಕೂ ಬಾಯಿಯು ಕೈಗೆ ತೊನ್ನು ಬಡಿದಿರುವುದನ್ನು ಕಂಡು ರೋದನ ಮಾಡುತ್ತಾ, ನಿವೃತ್ತಿ ಮಾರ್ಗವನ್ನು ಕೇಳಿದಳು. ಆಗ ಯಾದವಾರ್ಯರು ಅಕ್ಕನನ್ನು ತುಲಸೀ ದಾಸರ ಬಳಿಗೆ ಕಳುಹಿಸುತ್ತಾರೆ. ದಾಸರು ಹೊಂಡದಿಂದ ಹೊರಬಂದ ಮೇಲೆ ಅವರ ಲುಂಗಿಗೆ ಹತ್ತಿದ ಮೃತ್ತಿಕೆಯನ್ನು ತನ್ನ ಕೈಗೆ ಲೇಪನ ಮಾಡಿ ಕೊಂಡಳು. ಕೆಲದಿನಗಳಲ್ಲಿ ತೊನ್ನು ಮಾಯವಾಯಿತು. ದಾಸರನ್ನು ಕ್ಷಮೆ ಬೇಡಿದಳು. ಆಗ ದಾಸರು ವೆಂಕೂಬಾಯಿಗೆ—

"ನೀವು ಯಾದವಾರ್ಯರನ್ನು ಮಾನವ ಮಾತ್ರರೆಂದು ತಿಳಿದು, ಅವರನ್ನು ತಾತ್ಸಾರ ಬುದ್ಧಿಯಿಂದ ನೋಡುವುದರಿಂದ ನಿಮಗೆ ತೊನ್ನು ಬಂದಿತು. ಮಾನಸ ಪೂಜಾಸಕ್ತರಾದ ಯಾದವಾರ್ಯರು ತಡವಾಗಿ ಏಳುವುದು ನಿಮಗೆ ತಪ್ಪಾಗಿ ಕಂಡಿತು. ಇನ್ನಾದರೂ ಯಾದವಾರ್ಯರು ದೇವಾಂಶಜರೆಂದು ತಿಳಿದು, ಅವರನ್ನು ಗೌರವಾದರದಿಂದ ನೋಡಿ. ತಾತ್ಸಾರ ಮಾಡಬೇಡಿ. ಯಾದವಾರ್ಯರು ಮಹಾತ್ಮರಿದ್ದಾರೆ. ಎನ್ನ ಸ್ವರೂಪೋದ್ಧಾರಕರು. ಅವರನ್ನು ಸಾಮಾನ್ಯರೆಂದು ತಿಳಿಯುವುದೇ ಮಹಾಪರಾಧ, ಮಹಾಪಾಪವೆಂದು ತಿಳಿಸಿ ವೆಂಕೂಬಾಯಿಗೆ ಬುದ್ಧಿ ಮಾತು ಹೇಳಿದರು. ಯಾದವಾರ್ಯರು ನಿಗ್ರಹಾನುಗ್ರಹ ಶಕ್ತರು.

ಲಕ್ಷ ಬ್ರಾಹ್ಮಣ ಭೋಜನ

ಶ್ರೀ ಪಾಂಡುರಂಗಿ ನರಸಿಂಹಾಚಾರ್ಯರು ಶ್ರೀ ಮದುತ್ತರಾದಿ ಮಠದ ಪೀಠವನ್ನಲಂಕರಿಸಿ **ಶ್ರೀ ವಿದ್ಯಾಧೀಶ ತೀರ್ಥ**ರಾಗಿ ವಿರಾಜಮಾನ ರಾದರು. ಇವರ ಮಾತಾ ಪಿತೃಗಳು **ಶ್ರೀ ವಾದಿರಾಜ ಯತಿರಾಜ**ರ ಸೇವೆ ಮಾಡಿ ಸತ್ಪುತ್ರನನ್ನು ಕರುಣಿಸಿದರೆ ಲಕ್ಷ ಬ್ರಾಹ್ಮಣರ ಭೋಜನ ಮಾಡಿಸು ವುದಾಗಿ ಹರಕೆ ಹೊತ್ತಿದ್ದರಂತೆ. ಹರಕೆಯ ವಿಷಯವಾಗಿ ವಿದ್ಯಾಧೀಶರಿಗೆ, ಅವರ ತಾಯಿ ತಿಳಿಸಿ ಕರ್ತವ್ಯವನ್ನು ಸೂಚಿಸುತ್ತಾರೆ. ಜ್ಞಾನಿಗಳಾದ ವಿದ್ಯಾಧೀಶರು ಹರಕೆಯನ್ನು ಪೂರ್ಣ ಮಾಡುವ ಯೋಚನೆಯಲ್ಲಿರುತ್ತಾರೆ. ಅವರಿಗೆ ಒಂದು ರಾತ್ರಿ ಸ್ವಪ್ನವಾಗುತ್ತದೆ. ಸ್ವಪ್ನದಲ್ಲಿ ಅವರು ಶ್ರೀ ಯಾದವಾರ್ಯರ

ಉದರ ಪ್ರವೇಶ ಮಾಡಿ, ಅಲ್ಲಿ ಲಕ್ಷ ಬ್ರಾಹ್ಮಣರು ಭೋಜನಕ್ಕೆ ಕುಳಿತಿರುವ ದೃಶ್ಯವನ್ನು ನೋಡುತ್ತಾರೆ.

ಅನಂತರ ಒಂದು ದ್ವಾದಶಿಯ ದಿನ ಯಾದವಾರ್ಯರನ್ನು ವಿದ್ಯಾಧೀಶರು, ಶ್ರೀ ಮಠಕ್ಕೆ ಆಹ್ವಾನಿಸುತ್ತಾರೆ. ಅವರಿಗೆ ತೀರ್ಥವನ್ನು ಕೊಟ್ಟು, ತಮ್ಮ ತಾಯಿಯವರನ್ನು ಕರೆದು ಅವರಿಂದ ಕೃಷ್ಣಾರ್ಪಣ ಹೇಳಿಸುತ್ತಾರೆ. ಯಾದ ವಾರ್ಯರಿಗೆ ಅಂದು ಮೃಷ್ಟಾನ್ನ ಭೋಜನ ಮಾಡಿಸುತ್ತಾರೆ. ಅವರು ತೃಪ್ತ ರಾದರೆ ತಮ್ಮ ತಾಯಿಯ ಹರಕೆ ಪೂರ್ಣವಾಗುವುದೆಂಬುದನ್ನವರು ಬಲ್ಲರು. ಅನಂತರ ವಿದ್ಯಾಧೀಶರು ತಮ್ಮ ತಾಯಿಯವರನ್ನು ಕರೆದು ಯಾದವಾರ್ಯರ ಮಹಿಮೆ ತಿಳಿಸಿ, ಅವರೊಬ್ಬರಿಗೆ ಭೋಜನ ಮಾಡಿಸಿ ತೃಪ್ತಿಪಡಿಸಿದುದರಿಂದ ಲಕ್ಷ ಬ್ರಾಹ್ಮಣರ ಭೋಜನ ಮಾಡಿಸಿದ ಫಲವು ತಮಗೆ ಪ್ರಾಪ್ತವಾಯಿತೆಂದು, ತಾಯಿಯವರ ಹರಕೆ ಪೂರ್ಣವಾಯಿತೆಂದು ತಮ್ಮ ಸ್ವಪ್ನ ವೃತ್ತಾಂತವನ್ನು ತಿಳಿಸುತ್ತಾರೆ. ಮಹಾತ್ಮರ ಸೇವೆಯನ್ನು ಮಾಡಿ, ಮಗನನ್ನು ಪಡೆದ ಮಾತೆಯು ಮತ್ತೊಬ್ಬ ಮಹಾತ್ಮರಿಗೆ ಭೋಜನ ಮಾಡಿಸಿ ತನ್ನ ಹರಕೆಯನ್ನು ಪೂರ್ಣ ಮಾಡಿಕೊಂಡಳು ! ಸತ್ಪುತ್ರನನ್ನು ಪಡೆದ ಸಾಧ್ವೀಮಣಿಯ ಜನ್ಮ ಸಾರ್ಥಕ ವಾಯಿತು !

ನುಚ್ಚಿನ ಆಚಾರ್ಯರಿಗೆ ಭೂದಾನ

ಶ್ರೀ ಯಾದವಾರ್ಯರು, ಕಾಶೀಯಾತ್ರೆಯನ್ನು ಮುಗಿಸಿಕೊಂಡು ಏಕ್ಕುಂಡಿಗೆ ಬಂದರು. ಅಲ್ಲಿ ನದೀ ತೀರದಲ್ಲಿ ಅಶ್ವತ್ಥ ವೃಕ್ಷದ ಕೆಳಗೆ ಕುಳಿತು ತಪಸ್ಸು ಮಾಡಿದರು. ಆಗ ಧೂಪದಹಾಳು ದೇಸಾಯಿಯು ಶ್ರೀ ಯಾದವಾರ್ಯ ರಿಗೆ ದೇವರ ನೈವೇದ್ಯಕ್ಕಾಗಿ ಆಹಾರ ಸಾಮಗ್ರಿಗಳನ್ನು ಒದಗಿಸಿಕೊಡುತ್ತಿದ್ದನು. ಒಂದು ದಿನ ದೇಸಾಯಿಯು, ತಮ್ಮಿಂದ ಶಾಶ್ವತವಾದ ಸೇವೆಯನ್ನು ಸ್ವೀಕರಿಸ ಬೇಕೆಂದು ಯಾದವಾರ್ಯರಲ್ಲಿ ಅರಿಕೆಮಾಡಿಕೊಂಡನು. ಯಾದವಾರ್ಯರ ಸಮ್ಮತಿ ಪಡೆದನು.

ಒಂದು ಕಾಲದಲ್ಲಿ ಶ್ರೀ ಯಾದವಾರ್ಯರು ಏನನ್ನೂ ಸ್ವೀಕರಿಸುತ್ತಿರಲಿಲ್ಲ. ದೇಹ ಪೋಷಣೆಗಾಗಿ ಅಗತ್ಯವಾದಷ್ಟು ಜೋಳದ ನುಚ್ಚನ್ನು ಮಾತ್ರ ತೆಗೆದು

ಕೊಂಡರು. ಈಗ ದೇಸಾಯಿಯವರಿಂದ ಭೂದಾನವನ್ನು ಪಡೆದರು. ಇದು ದಾತೃಗಳ ಸುಕೃತ ವಿಶೇಷವೆಂದು ಭಾವಿಸಬೇಕು !

ಶೇಷಶಾಯಿ ಸಾಲಿಗ್ರಾಮ

ಒಂದು ದಿನ ಯಾದವಾರ್ಯರು ಶಿಷ್ಯ ಸಮೇತ ನದಿಗೆ ಸ್ನಾನಕ್ಕೆ ಹೊರ ಟರು. ದಾರಿಯಲ್ಲಿದ್ದ ಕಟುಕನ ಅಂಗಡಿಯ ಕಡೆ ನೋಡಿ ಕೈಮುಗಿದರು. ಶಿಷ್ಯ ರಿಗೆ ಭಯಾಶ್ಚರ್ಯಗಳಾದುವು. ಆರ್ಯರು ವ್ಯಾಧನನ್ನು ಕಂಡು ಅವನ ಬಳಿ ಇದ್ದ ತೂಕದ ಕಲ್ಲನ್ನು ತಮಗೆ ಕೊಡಬೇಕೆಂದರು. ಅವನು ಅಪೇಕ್ಷಿಸಿದಂತೆ ಆ ಶಿಲೆಗೆ ಬದಲಾಗಿ ದ್ರವ್ಯವನ್ನಿತ್ತು ಆ ಕಲ್ಲನ್ನು ತೆಗೆದುಕೊಂಡರು. ಅದನ್ನು ನದಿ ಯಲ್ಲಿ ತೊಳೆದು ತಂದು ಮನೆಯಲ್ಲಿಟ್ಟು ಪೂಜೆ ಮಾಡಿದರು. ಆ ಶಿಲೆಯು ಶೇಷಶಾಯಿ ಸಾಲಿಗ್ರಾಮವೆಂಬುದು ಶಿಷ್ಯರಿಗೆ ಅನಂತರ ತಿಳಿದುಬಂದಿತು !

ಮಹಾತ್ಮರ ನಡೆನುಡಿಗಳ ಗೂಢಾರ್ಥವು ಮಂದ ಮತಿಗಳಿಗೆ ತಿಳಿಯಲಾಗದು.

ಶ್ರೀ ಭಾಗವತವು ಅಸ್ಥಿಗತವಾಗಿದ್ದಿತು !

ಶ್ರೀಯಾದವಾರ್ಯರು, ಶಿಷ್ಯ ಸಂಪತ್ತು ಬೆಳೆಸಿದರು. ಅವರಲ್ಲಿ ಪ್ರಮುಖ ರೆಂದರೆ ಬಿದರುಹಳ್ಳಿ ಶ್ರೀನಿವಾಸತೀರ್ಥರು. ಯಾದವಾರ್ಯರು ಭೌತಿಕ ದೇಹದಿಂದ **೧೦೫ ವರ್ಷಗಳು ಜೀವಿಸಿದರು.** ಕೊನೆಯವರಿಗೂ ದೇವತಾರ್ಚನೆ ಮಾಡಿದರು. ಶ್ರೀ ಸರ್ವಜ್ಞ ಶಾಸ್ತ್ರ ಪ್ರವಚನ ಮಾಡಿದರು. ಪಾರ್ಥಿವ ಶರೀರವನ್ನು ತೊರೆದು, ಯಾದವಾರ್ಯರು ವಿಮಾನಾರೂಢರಾಗಿ, ಆಕಾಶ ಮಾರ್ಗದಲ್ಲಿ ಹೋಗುತ್ತಿರಲು, ಪಾಂಡುರಂಗಿ ಕೇಶವಾಚಾರ್ಯರು ಯಾದವಾರ್ಯರ ದರ್ಶನ ಪಡೆದು, ಅವರಿಗೆ ಸಾಷ್ಟಾಂಗವೆರಗಿ, ತಮ್ಮ ತಾಯಿ ಯವರಿಗೆ ವಿಷಯವನ್ನು ವಿವರಿಸಿ ಹೇಳಿದರು.

ಕೇಶವಾಚಾರ್ಯರು ಎಕ್ಕುಂಡಿಗೆ ಬಂದರು. ಶ್ರೀ ಯಾದವಾರ್ಯರ ಅಸ್ಥಿ ಗಳನ್ನು ಅಭಿಷೇಕ ಮಾಡಿ, ಕರ್ಣ ಪ್ರದೇಶದಲ್ಲಿಟ್ಟುಕೊಂಡರು. ಆಗ ಅವರಿಗೆ

ಅಸ್ಥಿಗಳಿಂದ ಶ್ರೀಮದ್ಭಾಗವತ ಶ್ಲೋಕಗಳು ಕೇಳಿಬರುವುದನ್ನು ನೆರೆದಿದ್ದ ಸಜ್ಜನರಿಗೆ ತಿಳಿಸಿ ಯಾದವಾರ್ಯರಿಗೆ **ಶ್ರೀಭಾಗವತವು ಅಸ್ಥಿಗತವಾಗಿದೆ** ಎಂದು ನುಡಿದರು.

ಶ್ರೀ ಯಾದವಾರ್ಯರ ಅಸ್ಥಿಗಳನ್ನು ಎಕ್ಕುಂಡಿಯಲ್ಲಿ ಒಂದು ವೃಕ್ಷದ ಕೆಳಗೆ ಕಟ್ಟೆಯನ್ನು ಕಟ್ಟಿ ಅಲ್ಲಿಯೇ ಇಡುತ್ತಾರೆ. ಅದೇ ಕಟ್ಟೆಯು ಈಗ **ಯಾದವಾರ್ಯರ ಕಟ್ಟೆ** ಎಂಬುದಾಗಿ ಕರೆಯಲ್ಪಡುವುದು !

ಇತ್ತೀಚೆಗೆ ಶ್ರೀ ಯಾದವಾರ್ಯರ ಕಟ್ಟೆಯು ಪ್ರವಾಹದ ನೀರಿನಲ್ಲಿ ಮುಳಿಗಿ ಹೋಗಿವೆ !

ಮಹಾತ್ಮರಾದ ಶ್ರೀ ಯಾದವಾರ್ಯರು, ಮಾನವ ಜನಾಂಗಕ್ಕೆ ಮಂಗಳವನ್ನುಂಟು ಮಾಡಲಿ !

॥ ಶ್ರೀ ಕೃಷ್ಣಾರ್ಪಣಮಸ್ತು ॥

ಶ್ರೀ ಕರಾವಲಂಬ ಸ್ತೋತ್ರಮ್

ಶ್ರೀ ವೇದವ್ಯಾಸಾಯ ನಮಃ

ತ್ರಯ್ಯಾವಿಕಾಸಕಮಜಂ ಮುಹುರಂತರೇವ
ಸಂಚಿಂತ್ಯಮಧ್ವ ಗುರುಪಾದಯುಗಂ ಗುರೂಂಶ್ಚ
ವೇದೇಶಪಾದಜಲಜಂ ಹೃದಿ ಸಾಧುಕೃತ್ವಾ
ಸಂಪ್ರಾರ್ಥಯೇ ಶ್ರುತಿ ವಿಕಾಸಕ ಹಸ್ತದಾನಮ್ ॥೧॥

ಪದ್ಮಾಸನಾದಿ ಸುರಸತ್ತಮ ಭೂಸುರಾದಿ
ಸಲ್ಲೋಕ ಬೋಧಜನನೇ ಬದರೀ ನಿವಾಸಿನ್
ಸಚ್ಛಾಸ್ತ್ರ ಶಸ್ತ್ರಹೃತ್ ಸತ್ಕುಮತೇ ಸದಿಷ್ಟ
ವಾಸಿಷ್ಠ ಕೃಷ್ಣ ಮಮದೇಹಿ ಕರಾವಲಂಬಮ್ ॥೨॥

ಆಮ್ನಾಯ ವಿಸ್ತರವಿಶಾರದ ಶಾರದೇಶ
ಭೂತಾಧಿಪಾದಿ ಸುರಸಂಸ್ತುತ ಪಾದಪದ್ಮ
ಯೋಗೀಶಯೋಗಿ ಹೃದಯಾಮಲ ಕಂಜವಾಸ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೩॥

ಸದ್ಬ್ರಹ್ಮ ಸೂತ್ರ ವರಭಾರತ ತಂತ್ರಪೂರ್ವ
ನಿರ್ಮಾಣ ನಿರ್ಮಲ ಮತೇsಖಿಲ ದೋಷದೂರ
ಆನಂದ ಪೂರ್ಣ ಕರುಣಾಕರ ದೇವದೇವ !
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೪॥

ಅರ್ಕಾತ್ಮಜಾ ಜಲತರಂಗ ವಿಚಾರಚಾರು
ವಾಯೂಪನೀತ ಶುಭಗಂಧತ ರೂಪವಾಸಿನ್
ಅರ್ಕಪ್ರಭೈಣ ವರಚರ್ಮಧರೋರು ಧಾಮನ್
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೫॥

ತರ್ಕ್ಯಾಭಯೇತಕರತಾತ ಶುಕಸ್ಯಕೀಟ
ರಾಜ್ಯ ಪ್ರದಾಘಟಿತ ಸಂಘಟಿಕಾತ್ಮ ಶಕ್ತೇ
ಭೃತ್ಯಾರ್ತಿಹನ್ ಪ್ರಣತಪಾಲ ಸುವಂಶಕಾರಿನ್
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ||೬||

ಕಾಲೇಜಲೇ ಜಲದ ನೀರಕೃತೋರು ವರ್ಮ
ನ್ನಾಮ್ನಾಯ ಹಾರಿಸುರವೈರಿ ಹರಾವತಾರ
ಮತ್ಸ್ಯಸ್ವರೂಪ ಕೃತ ಕಂಜಜವೇದದಾಯಿನ್
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ||೭||

ಗೀರ್ವಾಣ ದೈತ್ಯಬಲಲೋಲಿತ ಸಿಂಧುಮಗ್ನ
ಮಂಥಾಚಲೋದ್ಧರಣ ದೇವಸುಧಾಪ್ತಿಹೇತೋಃ
ಕೂರ್ಮ ಸ್ವರೂಪ ಧರಭೂಧರ ನೀರಚಾರಿನ್
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ||೮||

ಕ್ಷೋಣೀಹರೋರು ಬಲದೈತ್ಯ ಹಿರಣ್ಯನೇತ್ರ
ಪ್ರಧ್ವಂಸ ದೌಂಷ್ಟ್ರಯುಗಳಾಗ್ರ ಸುರಪ್ರಮೋದ
ಪೃಥ್ವೀಧರಾಧರ ವರಾಂಗ ವರಾಹರೂಪ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ||೯||

ಪ್ರಹ್ಲಾದ ಶೋಕ ವಿನಿಮೋಚನ ದೇವಜಾತ
ಸಂತೋಷದೋರು ಬಲದೈತ್ಯ ಹಿರಣ್ಯದಾರಿನ್
ಸಿಂಹಾಸ್ಯಮಾನುಷ ಶರೀರ ವಿತಾವತಾರ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ||೧೦||

ದೇವೇಂದ್ರ ರಾಜ್ಯ ಹರದಾನವ ರಾಜಯಜ್ಞ
ಶಾಲಾರ್ಥಿ ರೂಪಧರ ವಜ್ರಧರಾರ್ಥಿಹಾರಿನ್
ಯಾಂಚಾಮಿಷಾದ ಸಂರವಂಚಕ ವಾಮನೇಶ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ||೧೧||

ತಾತಾಪಕಾರಿ ನೃಪವಂಶ ವನಪ್ರದಾಹ
ವನ್ಹೇ ಭೃಗುಪ್ರವರ ರಾಮ ರಮಾನಿವಾಸ
ಸೂರ್ಯಾಂಶ ಶುಭ್ರ ಪರಶು ಪ್ರವರಾಯುಧಾಢ್ಯ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೧೨॥

ರಕ್ಷೋಧಿರಾಜ ದಶಕಂಧರ ಕುಂಭಕರ್ಣ
ಪೂರ್ವಾರಿಕಾನಲ ಮರುದ್ವರ ಸೂನುಮಿತ್ರ
ಸೀತಾ ಮನೋಹರ ವರಾಂಗ ರಘೂತ್ಥರಾಮ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೧೩॥

ಕೃಷ್ಣಾಪ್ರಿಯಾಽ ಪ್ರಿಯಕರಾಽ ವನಿಭಾರಭೂತ
ರಾಜನ್ಯಸೂದನ ಸುರದ್ವಿಜ ಮೋದದಾಯಿನ್
ಭೈಷ್ಮೀಪುರಃ ಸರವಧೂವರಕೇಲಿ ಕೃಷ್ಣ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೧೪॥

ಸದ್ಧರ್ಮಚಾರಿ ಜನಮುಖ್ಯ ಸುರಾರಿವೃಂದ
ಸಮ್ಮೋಹನ ತ್ರಿದಶಬೋಧಬುಧ ಸ್ವರೂಪ
ಉಗ್ರಾದಿಹೇತಿ ನಿಚಯುಗ್ರಸನಾಮಿತಾತ್ಮನ್
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೧೫॥

ಜ್ಞಾನಾದಿ ಸದ್ಗುಣ ವಿಹೀನಜನ ಪ್ರಕೀರ್ಣ
ಕಾಲೇಕಲೇ ಸ್ತುರಗವಾಹನ ದುಷ್ಟಹಾರಿನ್
ಕಲ್ಕಿ ಸ್ವರೂಪಕೃತ ಪೂರ್ವಯುಗ ಪ್ರವೃತ್ತೇ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೧೬॥

ಯಜ್ಞಾತ್ರೇಯ ಕಪಿಲರ್ಷಭದತ್ತ ಧನ್ವಂತ
ಯಾತ್ವ ಸನ್ಮುಖಕುಮಾರ ಸುಯೋಷಿದಾತ್ಮನ್
ಸದ್ಧರ್ಮ್ಯ ಸೂನುವರ ತಾಪಸ ಹಂಸರೂಪ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೧೭॥

ಸತ್ಕೇಶವಾದಿ ದ್ವಿಷಡಾತ್ಮಕ ವಾಸುದೇವಾ
ದ್ಯಾತ್ಮಾದಿನಾ ಸುಚತುರರೂಪ ಸುಶಿಂಶುಮಾರ
ಕೃದ್ಧೋಲ್ಕ ಪೂರ್ವಕ ಸುಪಂಚಕ ದೇವರೂಪ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೧೮॥

ನಾರಾಯಣಾದಿ ಶತರೂಪ ಸಹಸ್ರರೂಪ
ವಿಶ್ವಾದಿನಾಮ ಬಹುರೂಪ ಪರಾದಿನಾಚ
ದಿವ್ಯಾಜತಾದ್ಯ ಮಿತರೂಪ ಸುವಿಶ್ವರೂಪ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೧೯॥

ಶ್ರೀವಿಷ್ಣುನಾಮಕ ಸುವರ್ಣಗ ಸಂಧಿಗಾತ್ಮನ್
ಮಂಡೂಕಸ್ತನುಜಹ್ರಸ್ಯಸು ನಾಮಕೇನ
ಧ್ಯಾತರ್ಷಿಣಾಂ ಸುಸುಖತೀರ್ಥ ಕರಾಬ್ಜಸೇವ್ಯ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೨೦॥

ವೈಕುಂಠ ಪೂರ್ವಕ ತ್ರಿಧಾಮಗತತ್ರಿರೂಪ
ಸ್ವಕ್ಷಾದಿನಾಮಗತ ವಿಶ್ವಪುರಸ್ಸರಾತ್ಮನ್
ಸತ್ಕೇಶವಾದಿ ಚತುರುತ್ತರ ವಿಶ್ವರೂಪ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೨೧॥

ಸತ್ಪಂಚರಾತ್ರ ಪ್ರತಿಪಾದ್ಯ ರಮಾದಿರೂಪ
ವ್ಯೂಹಾತ್ ಪುರಾಸುಪರಿಪೂಜ್ಯ ನವಸ್ವರೂಪ
ವಿಮಲಾದಿಶಕ್ತಿ ನವಕಾತ್ಮಕ ದಿವ್ಯರೂಪ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೨೨॥

ಸ್ವಾಯಂಭುವಾದಿ ಮನುಸಂಸ್ಥಿತ ದಿವ್ಯರಾಜ
ರಾಜೇಶ್ವರಾತ್ಮಕ ತಥಾಸದುಪೇಂದ್ರನಾಮನ್
ಸರ್ವೇಷುರಾಜ ಸುನಿವಿಷ್ಟ ವಿಭೂತಿರೂಪ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೨೩॥

ಪ್ರದ್ಯುಮ್ನ ಪಾರ್ಥನರವ್ಯೈನ್ಯ ಬಲಾನಿರುದ್ಧ
ಪೂರ್ವೇಷು ಸಂಸ್ತುತ ವಿಶೇಷ ವಿಭೂತಿರೂಪ
ಬ್ರಹ್ಮಾದಿಜೀವ ನಿವಹಾಖ್ಯ ವಿಭಿನ್ನಕಾಂಶ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೨೪॥

ಸತ್ಪ್ರಶ್ನಿಗರ್ಭ ಪಿತೃಹೃದ್ಯಗಯಾ ಪ್ರಯಾಗ
ವಾರಾಣಸಿ ಸ್ಥಿತಗದಾಧರ ಮಾಧವಾತ್ಮನ್
ಶ್ರೀ ವೇಂಕಟೇಶ ಸವಿಮಾನಗ ರಂಗನಾಥ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೨೫॥

ಸದ್ವಾರಕಾರಜತಪೀಠ ಸುವರ್ಣಪೂರ್ವ
ಬ್ರಹ್ಮಣ್ಯ ಮಧ್ವಮಠ ಸಂಸ್ಥಿತ ದಿವ್ಯಮೂರ್ತೇ
ಕಾಂಚಿಸ್ಥಿ ಸದ್ವರದ ರಾಜತ್ರಿವಿಕ್ರಮಾತ್ಮನ್
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೨೬॥

ಶ್ರೀ ಪಾಂಡುರಂಗ ಸುಶಮಂತಕ ಗಂಡಕಶ್ರೀ
ಮಂಷ್ಣಾದಿ ಕ್ಷೇತ್ರವರ ಸಂಸ್ಥಿತ ನೈಕರೂಪ
ರೂಪೈರ್ಗುಣೈರವಯ ವೈಸ್ತದಿತಸ್ತ್ವನಂತ
ವಾಸಿಷ್ಠ ಕೃಷ್ಣಮಮದೇಹಿ ಕರಾವಲಂಬಮ್ ॥೨೭॥

'ಅ' ಆದಿಕ್ಷಾಂತ ತತವರ್ಣ ಸುವಾಚ್ಯ ಭೂತ
ನಿರ್ಭೇದ ಮೂರ್ತಿಕ ಮಹಾಸದಜಾದಿ ರೂಪೈಃ
ಶಕ್ತ್ಯಾದಿಭಿರ್ವಿಗತ ಪಂಚದಶೈಕ ರೂಪ
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೨೮॥

ಸೂರ್ಯಾನಲ ಪ್ರಭೃತಿ ದೃಗ್ದುರಿತಾಘತೂಲ
ರಾಶಿಪ್ರದಾಹಕ ಸುದರ್ಶನ ನಾಮಧೇಯ
ನಾರಾಯಣ ಪ್ರಭೃತಿರೂಪ ಸುಪಂಚಕಾತ್ಮನ್
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೨೯॥

ಇಚ್ಛಾದಿಶಕ್ತಿ ತೃತಯೇನ ತಥಾಣಿಮಾದಿ
ಶಕ್ತ್ಯಷ್ಟಕೇನ ವಿಗತಾಖಿಲ ಭೇದಮೂರ್ತೇ
ಸನ್ಮೋಚಕಾದಿ ನವಶಕ್ತ್ಯ ವಿಭಿನ್ನರೂಪ
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೩೦॥

ಜೀವಸ್ವರೂಪ ವಿನಿಯಾಮಕ ಬಿಂಬರೂಪ
ಮೂಲೇಶನಾಮಕ ಸುಸಾರ ಭುಗೀಂದ್ರರೂಪ
ಪಾದೇಶರೂಪಕ ವಿರಾಡಥ ಪದ್ಮನಾಭ
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೩೧॥

ಕ್ಷೀರಾಬ್ಧಿ ಸಂಗತ ಮಹಾಜಲಪಾತವಾಡ
ವಾಗ್ನಿಸ್ವರೂಪ ಪರಮಾಣು ಗತಾಣುರೂಪ
ಅವ್ಯಾಕೃತಾಂಬರಗತಾಽಪರಿಮೇಯರೂಪ
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೩೨॥

ಬ್ರಹ್ಮಾದಿ ಸರ್ವಜಗತಃ ಸುವಿಶಿಷ್ಟತೋಽಪಿ
ಸರ್ವತ್ರ ಸಂಸ್ಥಿತ ನಿಮಿತ್ತತ ಏವಚಾಸ
ವ್ಯಾಸಸ್ಸವೀತಿ ಹೀಶ್ರುತೇರಿತ ವ್ಯಾಸನಾಮನ್
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೩೩॥

ನಿರ್ದೋಷ ಪೂರ್ಣಗುಣ ಚಿಜ್ಜಡ ಭಿನ್ನರೂಪ
ಶ್ರುತ್ಯಾಯತಸ್ತ್ವಧಿಗತೋಽಪಿ ತತಸ್ತ್ವನಾಮನ್
ಸಶ್ರೀಕರಾಖ್ಯ ಹರಿನಾಮಕ ವ್ಯೂಹರೂಪ
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೩೪॥

ಪೈಲೋಡು ಲೋಮಿವರ ಜೈಮಿನಿ ಕಾಶಕೃಥ್ನ
ಕಾಷ್ಣಾರ್ಜನಿ ಪ್ರಭೃತಿಶಿಷ್ಯ ಸುಸೇವ್ಯಪಾದ
ಕಾನೀನಮುದ್ಗುರು ಸುಸೇವ್ಯ ಪದಾಬ್ಜಯುಗ್ಮ
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೩೫॥

ನಾನಾವಿಕರ್ಮಜನಿತಾ್ಯಶುಭಸಾಗರಾಂತೇ
ಸಂಭ್ರಾಮ್ಯತಃ ಪರಿಹತಸ್ಯ ಷಡೂರ್ಮಿಜಾಲೈಃ
ಪುತ್ರಾದಿ ನಕ್ರನಿಗ್ರಹೀತ ಶರೀರಕಸ್ಯ
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೩೭॥

ಲಕ್ಷ್ಮೀನಿವಾಸ ಭವನೀರ ವಿಹೀನಕೂಪ
ಮಧ್ಯೇಸ್ಥಿತಸ್ಯ ಮದಭಾರ ವಿಭಿನ್ನಬುದ್ಧೇ
ತೃಷ್ಣಾಖ್ಯವಾರಣ ಭಯೇನ ದಿಗಂತ ಭಾಜೋ
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೩೭॥

ಆಶಾಮದ ಪ್ರಭೃತಿಸಿಂಹ ವೃಕಾದಿ ಸತ್ವೈಃ
ಕೀರ್ಣೇಟತೋಭವ ಭಯಂಕರ ಕಾನನೇಷು
ಪಂಚೇಷು ಚೋರಹೃತಬೋಧ ಸಂವಿತ್ತಕಸ್ಯ
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೩೮॥

ಅಜ್ಞಾನಮೋಹ ಪಟಲಾದ್ಗತ ಚಕ್ಷುಷೋಲಂ
ಮಾರ್ಗಾನ್ವಿತಾಸ್ಖಲಿತ ಮಾಶದಯಾಂಬುರಾಶೇ
ಕಿಂಗಮ್ಯಮಿತ್ಯವಿರತಂ ರಟತೋರಮೇಶ
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೩೯॥

ಆಜನ್ಮ ಜೀರ್ಣ ಬಹುದೋಷಿಣ ಈಶಜಾತ
ತ್ವತ್ಪಾದ ನೀರಜಯುಗಂ ಹೃದಿಕುರ್ವತೋಲಂ
ದೇವಾಪರಾಧ ಮನವೇಕ್ಷ್ಯಚ ವೀಕ್ಷಭಕ್ತಮ್
ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಮ್ ॥೪೦॥

ಆಮ್ನಾಯ ಭಾರತ ಪುರಾಣ ಸರಃಪ್ರಭೂತ
ವಾಸಿಷ್ಠಕೃಷ್ಣ ನುತಿಪಂಕಜ ಮಾಲಿಕೇಯಂ
ದೇವತ್ವದರ್ಥಮಮಲಾಂ ರಚಿತೋನಿತಾಂತಮ್
ಕೃತ್ವಾಧಿಯ ಸ್ವಹೃದಯೇ ಭವಭೂತಿದೋಮೇ

ವಾಸಿಷ್ಠಕೃಷ್ಣ ಪದಪದ್ಮ ಮಧುವ್ರತೇನ
ವೇದೇಶ ತೀರ್ಥ ಗುರುಸೇವಕ ಯಾದವೇನ
ಹಸ್ತಾವಲಂಬನಮಿದಂ ರಚಿತಂ ಪಠೇದ್ಯ
ಸ್ತಸ್ಯಪ್ರದಾಸ್ಯತಿಕರಮ್ ಬದರೀನಿವಾಸೀ

ಇತಿ ಶ್ರೀಮದ್ವೇದೇಶ ತೀರ್ಥ ಪೂಜ್ಯಪಾದಾ
ರಾಧಕೇನ ಯದುಪತಿ ನಾ ವಿರಚಿತ
ಕರಾವಲಂಬನ ಸ್ತುತಿ ಸಮಾಪ್ತಾ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಇತರ ಕೃತಿಗಳು

1.	ಶ್ರೀ ರಾಘವೇಂದ್ರ ನಕ್ಷತ್ರಮಾಲಿಕಾ	...	0-30
2.	ಶ್ರೀ ರಾಘವೇಂದ್ರ ಸ್ತೋತ್ರಮ್ (ತಾತ್ಪರ್ಯ ಸಹಿತ)	...	0-40
3.	ಶ್ರೀ ರಾಘವೇಂದ್ರ ಶತಕ	...	0-50
4.	ಶ್ರೀ ರಾಘವೇಂದ್ರ ಸುಪ್ರಭಾತಮ್	...	0-30
5.	ಶ್ರೀ ರಾಘವೇಂದ್ರ ನಕ್ಷತ್ರಮಾಲಿಕಾ	...	0-30
6.	ಮಂತ್ರಾಲಯ ಪ್ರಭುಗಳು ದ್ವೈತಯತಿಗಳೂ ಹಾಗೂ ದಾಸಶ್ರೇಷ್ಠರ ಚರಿತ್ರೆಗಳು	...	3-00

ಪ್ರತಿಗಳಿಗೆ :

ಜೆ. ಹೆಚ್. ನರಸಿಂಹಮೂರ್ತಿ

3, ಟೆಂಪಲ್ ರೋಡ್, 8ನೇ ಕ್ರಾಸ್

ಮಲ್ಲೇಶ್ವರ, ಬೆಂಗಳೂರು-3